# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆಯಲ್ಲಿನ ಆಶ್ರಮ ಹಾಗೂ ರೆಸಿಡೆನ್ಸಿಯಲ್ ಶಾಲೆಯ ಮೆಟ್ರಿಕಪೂರ್ವ ವಿದ್ಯಾರ್ಥಿನಿಲಯದ ಊಟದ ವೆಚ್ಚವನ್ನು ಹಾಗೂ ಮೆಟ್ರಿಕ ನಂತರದ ವಿದ್ಯಾರ್ಥಿನಿಲಯದ ಊಟ ಹಾಗೂ ವಸತಿವೆಚ್ಚವನ್ನು ಹೆಚ್ಚಿಸುವ ಬಗ್ಗೆ — ಆದೇಶ.

---

ಪ್ರಸ್ತುತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆಗಳ ವಿದ್ಯಾರ್ಥಿನಿಲಯಗಳಲ್ಲಿನ ನಿವಾಸಿಗಳು ಊಟ ಹಾಗೂ ವಸತಿವೆಚ್ಚವನ್ನು ಮತ್ತು ಹೆಚ್ಚಿನ ಊಟ ಹಾಗೂ ವಸತಿವೆಚ್ಚವನ್ನು (ಮೆಟ್ರಿಕನಂತರದ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ) ಈ ಕೆಳಕಂಡ ದರಗಳಲ್ಲಿ ಪಡೆಯುತ್ತಿದ್ದಾರೆ.

(ಅ) ಆಶ್ರಮ:ವಸತಿಶಾಲೆಗಳು — ತಿಂಗಳಿಗೆ ರೂ. 75—00
(ಆ) ಮೆಟ್ರಿಕಪೂರ್ವ ವಿದ್ಯಾರ್ಥಿನಿಲಯಗಳು — ತಿಂಗಳಿಗೆ ರೂ. 100—00
(ಇ) ಮೆಟ್ರಿಕನಂತರದ ವಿದ್ಯಾರ್ಥಿನಿಲಯಗಳು — ತಿಂಗಳಿಗೆ ರೂ. 150—00

ಈ ದರಗಳನ್ನು 1981 ಮತ್ತು 1983ರಲ್ಲಿದ್ದ ಬೆಲೆಗಳ ಆಧಾರದ ಮೇಲೆ ನಿಗದಿಪಡಿಸಲಾಗಿದ್ದು, ಈ ಹಣದಿಂದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಬೆಳಗಿನ ಉಪಹಾರ ಮತ್ತು ಎರಡು ಊಟಗಳನ್ನು ಪ್ರತಿನಿತ್ಯ ನೀಡಬೇಕಾಗುತ್ತದೆ. ಆದರೆ, ಈಗ ಅಗತ್ಯ ವಸ್ತುಗಳ ಬೆಲೆ ಹೆಚ್ಚಳದ ಕಾರಣದಿಂದಾಗಿ, ವಿದ್ಯಾರ್ಥಿನಿಲಯದ ನಿವಾಸಿಗಳಿಗೆ ಸರ್ಕಾರ ನೀಡುವ ಹಣದಿಂದ ನಿಗಧಿತ ಪ್ರಮಾಣದ ಆಹಾರವನ್ನು ಕೊಡುವುದು ಸಾಧ್ಯವಾಗುವುದಿಲ್ಲವೆಂಬ ಅಂಶವು ಸರ್ಕಾರದ ಗಮನಕ್ಕೆ ಬಂದುದರಿಂದ, ಅಲ್ಲದೆ, ಈ ದರವನ್ನು ಹೆಚ್ಚಿಸುವಂತೆ ವಿದ್ಯಾರ್ಥಿಗಳಿಂದ, ಸಂಸ್ಥೆಗಳಿಂದ, ಜಿಲ್ಲಾ ಪರಿಷತ್ತು ಹಾಗೂ ಸಾರ್ವಜನಿಕರಿಂದ ಸರ್ಕಾರಕ್ಕೆ ಮನವಿಗಳು ಬರುತ್ತಿದ್ದುದರ ಮೇರೆಗೆ, ಅಲ್ಲದೇ, ನಿಗಧಿತ ಪ್ರಮಾಣದಲ್ಲಿ ಆಹಾರ ದೊರಕುತ್ತಿಲ್ಲವೆಂದು ವಿದ್ಯಾರ್ಥಿನಿಲಯದ ನಿವಾಸಿಗಳು ಮುಷ್ಕರ ನಡೆಸುತ್ತಿರುವ ಬಗ್ಗೆ ವರದಿಗಳೂ ಸಹಾ ಸರ್ಕಾರದ ಗಮನಕ್ಕೆ ಬಂದುದರಿಂದ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಹಾಲಿ ಇರುವ ಭೋಜನ ದರವನ್ನು ಹೆಚ್ಚಿಸುವ ಅಗತ್ಯತೆಯನ್ನು ಸರ್ಕಾರ ಮನಗಂಡು ಈ ದರಗಳನ್ನು ಈ ಕೆಳಕಂಡಂತೆ ಹೆಚ್ಚಿಸಲು ತೀರ್ಮಾನಿಸಿದೆ.

| | ಇಂದ | ಗೆ |
|---|---|---|
| (ಅ) ಆಶ್ರಮ:ವಸತಿಶಾಲೆಗಳು | ರೂ. 75—00 | 100—00 |
| (ಆ) ಮೆಟ್ರಿಕಪೂರ್ವ ವಿದ್ಯಾರ್ಥಿನಿಲಯಗಳು | ರೂ. 100—00 | 150—00 |
| (ಇ) ಮೆಟ್ರಿಕನಂತರದ ವಿದ್ಯಾರ್ಥಿನಿಲಯಗಳು (ಹೆಚ್ಚುವರಿ ಊಟ ಮತ್ತು ವಸತಿ) | ರೂ. 150—00 | 200—00 |

**ಆದೇಶ ಸಂಖ್ಯೆ: ಎಸಡಬ್ಲ್ಯೂಎಲ 44 ಎಸಇಡಬ್ಲ್ಯೂ 89, ಬೆಂಗಳೂರು, ದಿನಾಂಕ 10.4.1990.**

ಮೇಲಿನ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ, ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆಗಳ ಕಾರ್ಯವ್ಯಾಪ್ತಿಯಲ್ಲಿ ಬರುವ ಆಶ್ರಮ ಹಾಗೂ ವಸತಿ ಶಾಲೆಗಳು, ಮೆಟ್ರಿಕಪೂರ್ವ ವಿದ್ಯಾರ್ಥಿನಿಲಯಗಳು ಹಾಗೂ ಮೆಟ್ರಿಕನಂತರ ವಿದ್ಯಾರ್ಥಿನಿಲಯಗಳಲ್ಲಿನ ಭೋಜನ ವೆಚ್ಚವನ್ನು ದಿನಾಂಕ 1.6.1990 ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಹೆಚ್ಚಿಸಲು ಸರ್ಕಾರದ ಮಂಜೂರಾತಿಯನ್ನು ನೀಡಿದೆ.

............2.

| | ಇಂದ | ಗೆ |
|---|---|---|
| | ರೂ.ಗಳು | ರೂ.ಗಳು |
| (ಅ) ಆಶ್ರಮ ವಸತಿಶಾಲೆಗಳು | 75-00 | 100-00 |
| (ಆ) ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳು | 100-00 | 150-00 |
| (ಇ) ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳು (ಹೆಚ್ಚುವರಿ ಊಟ ಮತ್ತು ವಸತಿ) | 150-00 | 200-00 |

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಎಫ್‌ಡಿ 456 ವೆಚ್ಚ-5:90, ದಿನಾಂಕ 2.4.90 ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸಹಿ
(ಶಾಂತಿ ಶಂಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ,

ಸಂಖ್ಯೆ:ಡಿಬಿಸಿಎಂ:ಇಡಿಯುಎ:ಹೆಚ್ 2:ಸಿಆರ್ 168:87-88. ದಿನಾಂಕ 26ನೇ ಏಪ್ರಿಲ್ 1990.

ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖಾಧಿಕಾರಿಯವರಿಗೆ ಹಾಗೂ ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಗಳವರ ಮಾಹಿತಿಗೆ ಮತ್ತು ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

26/4
ನಿರ್ದೇಶಕರ ಪರವಾಗಿ,
ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆ,
ಬೆಂಗಳೂರು.

ರಣ.